ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 31/3/2021

# ಶಾಸನ ಸಭೆ ಕಲಾಪದ ಗೊತ್ತುಗುರಿ-ಮಾಧ್ಯಮಗಳಿಗೆ ನೆರವು

ಬೆಂಗಳೂರು: ಶಾಸನ ರೂಪಿಸುವ ನಿಟ್ಟನಲ್ಲಿ ಗಂಭೀರ ಚರ್ಚೆ ನಡೆಯಬೇಕಾದ ವಿಧಾನಮಂಡಲ ಕಲಾಪಗಳು ಸದ್ಬಳಕೆಯಾಗದೆ ಹಾದಿತಪ್ಪುತ್ತಿವೆ,ಕೋಟ್ಯಂತರ ರೂಪಾಯಿ ಜನರ ದುಡ್ಡು ಪೋಲಾಗುತ್ತಿದೆ.ಈ ಬಗ್ಗೆ ಮಾಧ್ಯಮಗಳು ಕೂಡಾ ವಸ್ತುನಿಷ್ಠ ವರದಿ ಮಾಡುತ್ತಿಲ್ಲ, ತಮ್ಮ ನಿಜವಾದ ಕಾರ್ಯ ಕ್ಷಮತೆಯನ್ನು ಮರೆಯುತ್ತಿವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಿಷಾದ ವ್ಯಕ್ತಪಡಿಸಿದ್ದಾರೆ.

ಕಂದಾಯಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿದ್ದ ಕನ್ನಡ ಕಾಯಕ ವರುಷದ ಸರಿಗನ್ನಡ ಬಳಕೆ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಈ ಹಿಂದೆ ವಿಧಾನಪರಿಷತ್‌ಗೆ ಸಾಹಿತಿಗಳು,ಕಲಾವಿದರು ಸೇರಿದಂತೆ ಯಾವುದಾದರೂ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರು ಆಯ್ಕೆಯಾಗಿ ಬರುತ್ತಿದ್ದರು. ಈಗ ರಾಜಕಾರಣಿಗಳ ಬೆಂಬಲಿಗರು, ಚುನಾವಣೆಯಲ್ಲಿ ಸೋತವರು ಹಾಗೂ ಲಾಬಿ ಮೂಲಕ ಮೇಲ್ಮನೆ ಪ್ರವೇಶಿಸುತ್ತಿದ್ದಾರೆ.ಅವರಿಗೆ ಸಾಮಾಜಿಕ ಕಳಕಳಿ ಇರಲಿ ಸಾಮಾನ್ಯ ಜ್ಞಾನ ಸಹ ಇರುವುದಿಲ್ಲ ಎಂದು ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಪರಿಷತ್ ಗೆ ಕಲಾಪ ನಡೆಯುವ ವೇಳೆ ಮೊಬೈಲ್ ನಿಷೇಧಿಸಲಾಗಿದೆ.ಆದರೂ ಕೆಲವರು ಮೊಬೈಲ್ ಗಳನ್ನು ತರುತ್ತಾರೆ ಎಂದ ಹೊರಟ್ಟಿ ,ಮಾಧ್ಯಮಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕಿದೆ.ಕ್ಷುಲ್ಲಕ ವಿಷಯಗಳನ್ನು ಮುಂದಿಟ್ಟುಕೊಂಡು ಇಡೀ ಸದನದ ಸಮಯವನ್ನು ಹಾಳು ಎಂದು ಹೇಳಿದರು.

ವಿಧಾನಮಂಡಲ ಕಲಾಪ ಎಷ್ಟು ಗಂಟೆ ನಡೆದಿದೆ,ಎಷ್ಟು ಖರ್ಚಾಗಿದೆ,ಯಾವ ಶಾಸಕ ಎಷ್ಟು ಅವಧಿ ಭಾಗವಹಿಸಿದ್ದಾನೆ,ಎಷ್ಟು ಪ್ರಶ್ನೆ ಕೇಳಿದ್ದಾನೆ,ಯಾವ ವಿಚಾರವಾಗಿ ಎಂಬುದೆಲ್ಲಾ ವರದಿ ಆಗಬೇಕು.ಆಗ ಆತನ ಕ್ಷೇತ್ರದ ಜನತೆಗೆ ಆ ಶಾಸಕನ ಅರ್ಹತೆ ತಿಳಿಯುತ್ತದೆ ಎಂದು ಸಭಾಪತಿ ತಿಳಿಸಿದರು.